# ಮಾಸ ಭವಿಷ್ಯ

❖ ಅರುಣ ಪಿ. ಭಟ್



**ಮೇಷ:** ವೃತ್ತಿನಿರತರಿಗೆ ಉತ್ತಮವಾದ ತಿಂಗಳು. ಉದ್ಯೋಗ ಸ್ಥಳದಲ್ಲಿ ಜವಾಬ್ದಾರಿ ಹಾಗೂ ಆದಾಯ ಹೆಚ್ಚಲಿದೆ. ಉದ್ಯಮ, ವ್ಯಾಪಾರ ಮಾಡುವವರಿಗೆ ಲಾಭ. ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ಅಗತ್ಯ. ವಿರೋಧಿಗಳ ಬಗ್ಗೆ ಎಚ್ಚರವಿರಲಿ. ಶುಭ: 10, 16, 28. ಅಶುಭ: 13, 19, 29



**ವೃಷಭ:** ಪ್ರೀತಿಪಾತ್ರರೊಂದಿಗೆ ಉತ್ತಮ ಸಮಯ ಕಳೆಯುವಿರಿ. ಒಡಹುಟ್ಟಿದವರ ಜತೆಗೆ ಬಾಂಧವ್ಯ ಗಟ್ಟಿಯಾಗಲಿದೆ. ಅತ್ಯುತ್ತಮ ಸಂಸ್ಥೆಯೊಂದರಲ್ಲಿ ಉದ್ಯೋಗ ದೊರೆಯುವ ಅವಕಾಶ ಇದೆ. ಶುಭ: 12, 16, 24. ಅಶುಭ: 17,28, 30



**ಮಿಥುನ:** ಜವಾಬ್ದಾರಿಯುತ ಕೆಲಸದ ಅವಕಾಶ ಬರುವುದು. ಉದ್ಯೋಗ ಸ್ಥಳದಲ್ಲಿ ಅನುಕೂಲಕರ ವಾತಾವರಣ. ಹಣಕಾಸು ಸ್ಥಿತಿ ಸುಧಾರಣೆ. ಆರೋಗ್ಯ ಸಮಸ್ಯೆ ಎದುರಾಗಬಹುದು. ಕುಟುಂಬದಲ್ಲಿ ಭಿನ್ನಾಭಿಪ್ರಾಯ ಸಾಧ್ಯತೆ. ಶುಭ: 11, 21, 29. ಅಶುಭ: 19, 22, 27



**ಕರ್ಕಾಟಕ:** ಸಂಗಾತಿ ಜತೆಗೆ ಬಾಂಧವ್ಯ ಗಟ್ಟಿಯಾಗಲಿದೆ. ಅವಿವಾಹಿತರಿಗೆ ಸೂಕ್ತ ಸಂಬಂಧ ದೊರೆಯುವುದು. ದೂರ ಪ್ರಯಾಣ ಬೇಡ. ವೃತ್ತಿಯಲ್ಲಿ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ವಿರೋಧಿಗಳಿಂದ ದೂರವಿರಿ. ಶುಭ: 09, 16, 22. ಅಶುಭ: 05, 15, 28



**ಸಿಂಹ:** ಸಂಬಂಧಿಕರಿಂದ ಪ್ರೀತಿ–ವಾತ್ಸಲ್ಯ ದೊರೆಯುತ್ತದೆ. ವಿದೇಶ ವ್ಯವಹಾರದಲ್ಲಿ ಅಭಿವೃದ್ಧಿ. ಪಾಲುದಾರಿಕೆ ವ್ಯವಹಾರಗಳಲ್ಲಿ ಲಾಭ. ನಿಮ್ಮ ವರ್ಚಸ್ಸು ಬದಲಾಗಲಿದೆ. ಆಪ್ತರ ಜತೆಗೆ ಸುಮಧುರವಾದ ಕ್ಷಣಗಳನ್ನು ಕಳೆಯಲಿದ್ದೀರಿ. ಶುಭ: 08, 12, 20. ಅಶುಭ: 11, 18, 27



**ಕನ್ಯಾ:** ಶೈಕ್ಷಣಿಕ, ತಂತ್ರಜ್ಞಾನ, ಸಾಹಿತ್ಯ ಕ್ಷೇತ್ರದಲ್ಲಿ ಇರುವವರಿಗೆ ಕೌಶಲ ಹೆಚ್ಚಾಗಲಿದೆ. ಮಕ್ಕಳಿಗೆ ಸಂಬಂಧಿಸಿದಂತೆ ಶುಭ ಸುದ್ದಿ ಕೇಳಲಿದ್ದೀರಿ. ಆರ್ಥಿಕ ಸ್ಥಿತಿ ಉತ್ತಮವಾಗಿರುತ್ತದೆ. ವ್ಯಾಪಾರ ವ್ಯವಹಾರದಲ್ಲಿ ವರ್ಚಸ್ಸು ವೃದ್ಧಿಸಲಿದೆ. ಶುಭ: 09, 14, 22. ಅಶುಭ: 11, 19, 23



**ತುಲಾ:** ಕುಟುಂಬದಲ್ಲಿ ಸಂತಸದ ವಾತಾವರಣ. ಆರೋಗ್ಯ ಸಮಸ್ಯೆಗಳು ನಿವಾರಣೆಯಾಗುತ್ತವೆ. ಆಸ್ತಿ, ವ್ಯಾಪಾರ–ವ್ಯವಹಾರಗಳಲ್ಲಿ ಪ್ರಗತಿ. ಆರ್ಥಿಕ ಪರಿಸ್ಥಿತಿ ಉತ್ತಮವಾಗಿರುತ್ತದೆ. ವಿವಿಧ ಕ್ಷೇತ್ರಗಳಲ್ಲಿ ನಿರೀಕ್ಷಿತ ಫಲಿತಾಂಶ ಸಿಗಲಿದೆ. ಶುಭ: 10, 18, 29. ಅಶುಭ: 11, 22, 30



**ವೃಶ್ಚಿಕ:** ಆತ್ಮವಿಶ್ವಾಸ ಹೆಚ್ಚಲಿದೆ. ಪೋಷಕರು ಹಾಗೂ ಒಡಹುಟ್ಟಿದವರ ಜತೆ ಬಾಂಧವ್ಯ ಗಟ್ಟಿಯಾಗಲಿದೆ. ಅದೃಷ್ಟ ನಿಮ್ಮ ಕೈ ಹಿಡಿಯಲಿದೆ. ಕೌಟುಂಬಿಕ ಜೀವನದಲ್ಲಿ ಸಂತೋಷ. ವಾಹನ, ಮನೆ ಖರೀದಿಗೆ ಪ್ರಶಸ್ತವಾದ ಸಮಯ. ಶುಭ: 11, 21, 29. ಅಶುಭ: 13, 25, 28



**ಧನಸ್ಸು:** ವೈಯಕ್ತಿಕ ಜೀವನದಲ್ಲಿ ಸಂಭ್ರಮದ ವಾತಾವರಣ. ಕುಟುಂಬದಲ್ಲಿ ಒಗ್ಗಟ್ಟು. ಆಸ್ತಿ ವಿಚಾರದಲ್ಲಿ ಶುಭ ಸುದ್ದಿ ಕೇಳುವಿರಿ. ವಿದೇಶಿ ವ್ಯವಹಾರ ಹೂಡಿಕೆಯಲ್ಲಿ ಲಾಭ. ವಾಹನ, ಮನೆ ವಿಚಾರದಲ್ಲಿ ಪ್ರಗತಿ. ಆರೋಗ್ಯದ ಬಗ್ಗೆ ಎಚ್ಚರಿಕೆ ಅಗತ್ಯ. ಶುಭ: 09, 14, 28. ಅಶುಭ: 11, 18, 28



**ಮಕರ:** ಆರೋಗ್ಯದಲ್ಲಿ ಚೇತರಿಕೆ. ಪಾಲುದಾರಿಕೆ ವ್ಯವಹಾರಗಳಲ್ಲಿ ಪ್ರಗತಿ. ಸ್ಥಿರಾಸ್ತಿಯಲ್ಲಿ ಲಾಭ. ವಿದೇಶಿ ವ್ಯವಹಾರ ಹಾಗೂ ಹೂಡಿಕೆಯಲ್ಲಿ ಸ್ಥಿರವಾದ ಪ್ರಗತಿ. ಸೈನ್ಯ, ಪೊಲೀಸ್ ಇಲಾಖೆಗಳಲ್ಲಿ ಇರುವವರು ಮೇಲುಗೈ ಸಾಧಿಸಲಿದ್ದೀರಿ. ಶುಭ: 11, 22, 26. ಅಶುಭ: 10, 17, 28



**ಕುಂಭ:** ಹಣಕಾಸು ಹೂಡಿಕೆಗೆ ಹಲವು ಅವಕಾಶಗಳು ದೊರೆಯಲಿವೆ. ಸಾಲ ಮರುಪಾವತಿಗೆ ಪ್ರಾಮಾಣಿಕ ಪ್ರಯತ್ನ ಮಾಡುವಿರಿ. ಕೆಲವು ಸಣ್ಣ ಪುಟ್ಟ ಆರೋಗ್ಯ ಸಮಸ್ಯೆಗಳು ಕಾಡಬಹುದು. ಆಸ್ತಿ ವ್ಯವಹಾರಗಳಲ್ಲಿ ಪ್ರಗತಿ ಕಾಣಲಿದೆ. ಶುಭ: 11, 16, 22. ಅಶುಭ: 13, 24, 29



**ಮೀನ:** ಆರ್ಥಿಕ ಸ್ಥಿತಿ ಉತ್ತಮ. ಶೈಕ್ಷಣಿಕ, ಔದ್ಯೋಗಿಕ ರಂಗಗಳಲ್ಲಿ ಪ್ರಗತಿ. ಮಕ್ಕಳ ವರ್ತನೆಯಿಂದ ನೆಮ್ಮದಿ. ಕೆಲಸದ ನಿಮಿತ್ತ ಹೊಸ ಸ್ಥಳಗಳಿಗೆ ತೆರಳಬೇಕಾಗುವುದು. ನಿಮ್ಮ ಕೆಲಸಗಳನ್ನು ಸುಲಭವಾಗಿ ಮುಗಿಸಲಿದ್ದೀರಿ. ಶುಭ: 02, 14, 25. ಅಶುಭ: 12, 24, 29